೨೨. ಕರ್ನಾಟಕವು, ಸರ್ಕಾರ ಹಾಗೂ ಸರ್ಕಾರಿ ನೌಕರರ ನಡುವಣ ಸೌಹಾರ್ದಯುತ ಸಂಬಂಧಗಳ ಒಂದು ಪರಂಪರೆಯನ್ನು ಹೊಂದಿದೆ. ನೌಕರರ ಬೇಡಿಕೆಗಳನ್ನು ಪೂರೈಸಲು ತನ್ನ ಕೈಲಾದ ಮಟ್ಟಿಗೆ ನನ್ನ ಸರ್ಕಾರ ಪ್ರಯತ್ನಿಸುತ್ತದೆ. ವಸತಿ ವ್ಯವಸ್ಥೆಯನ್ನು ವಿಶೇಷವಾಗಿ ತಾಲೂಕು ಕೇಂದ್ರ ಕಾರ್ಯಸ್ಥಾನಗಳಲ್ಲಿ ಹಾಗೂ ಸಣ್ಣ ಪಟ್ಟಣಗಳಲ್ಲಿ ವೃದ್ಧಿಗೊಳಿಸಲಾಗುತ್ತದೆ. ಈಗಿನ ವೇತನ ಶ್ರೇಣಿಗಳಲ್ಲಿರುವ ಅಸಮತೆಗಳನ್ನು ಪರಿಶೀಲಿಸುವ ಸಲುವಾಗಿ ಈಗಾಗಲೇ ಸರ್ಕಾರದ ಒಂದು ಸಮಿತಿ ಕಾರ್ಯನಿರ್ವಹಿಸುತ್ತಿದೆ. ಸಮಿತಿಯು ವರದಿಯನ್ನು ಸ್ವೀಕರಿಸಿದ ಕೂಡಲೇ ಸರ್ಕಾರವು ಶೀಘ್ರಕ್ರಮ ಕೈಗೆ ತಳ್ಳುವುದು. ಬಾಕಿ ಬೇಡಿಕೆಗಳ ಬಗ್ಗೆ ಮಾತುಕತೆಗಳನ್ನು ಮತ್ತು ಚರ್ಚೆಗಳನ್ನು ನಡೆಸಲು ನನ್ನ ಸರ್ಕಾರ ಸದಾ ಸಿದ್ಧವಿದೆ.

೨೩. ರಾಜ್ಯ ವಿಧಾನ ಸಭೆಗೆ ಚುನಾವಣೆಗಳು ನಡೆಯಬೇಕಾಗಿದ್ದುದರಿಂದ, ಯೋಜನಾ ಆಯೋಗದೊಂದಿಗೆ ಮುಂದಿನ ಹಣಕಾಸು ವರ್ಷದ ಯೋಜನಾ ರೂಪರೇಷೆಗಳನ್ನು ಅಂತಿಮಗೊಳಿಸಲು ಸಾಧ್ಯವಾಗಲಿಲ್ಲ. ಆದುದರಿಂದ ಈ ಅಧೀವೇಶನದ ಅವಧಿಯಲ್ಲಿ ನಿಮ್ಮ ಮುಂದೆ ಒಂದು ತಾತ್ಕಾಲಿಕ ಬಜೆಟ್ಟನ್ನು ಮಂಡಿಸಲಾಗುವುದು. ವಿಧಾನ ಮಂಡಲದ ಕೆಲವು ತುರ್ತು ವ್ಯವಹಾರಗಳನ್ನೂ ಕಾರ್ಯಕಲಾಪದಲ್ಲಿ ಸೇರಿಸಲಾಗುವುದು.

೨೪. ಸದಸ್ಯರೆಲ್ಲರೂ ತಮ್ಮ ಸೇವೆಯನ್ನು ರಾಜ್ಯದ ಉತ್ತರೋತ್ತರ ಅಭಿವೃದ್ಧಿ ಹಾಗೂ ಏಳಿಗೆಯ ಸಲುವಾಗಿ ಮುಂದುವರಿಸುತ್ತಾರೆಂಬ ವಿಷಯದಲ್ಲಿ ನನಗೆ ಯಾವುದೇ ಸಂಶಯವಿಲ್ಲ.

ನಿಮ್ಮ ಉದ್ದೇಶಗಳನ್ನು ಈಡೇರಿಸಿಕೊಳ್ಳುವಲ್ಲಿ ನಿಮಗೆ ಸಂಪೂರ್ಣ ಯಶಸ್ಸು ದೊರೆಯಲೆಂದು ಹಾರೈಸುತ್ತೇನೆ ಹಾಗೂ ನಿಮ್ಮೆಲ್ಲರಿಗೂ ಯುಗಾದಿ ಹಬ್ಬದ ಶುಭಾಶಯಗಳನ್ನು ಕೋರುತ್ತೇನೆ.

(ಸಭೆ ೪–೩೭ ನಿಮಿಷಗಳಿಗೆ ಸಮಾವೇಶಗೊಂಡಿತು)

ಅಧ್ಯಕ್ಷ ಶ್ರೀ ಬಿ. ಜಿ. ಬಣಕಾರ್ ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

ಅಧ್ಯಕ್ಷರು.— ಈಗ ಕೆಲವು ಸಂತಾಪ ಸೂಚಕ ನಿರ್ಣಯಗಳು ಇವೆ ಅವುಗಳನ್ನು ತೆಗೆದು ಕೊಳ್ಳೋಣ.

MR. SPEAKER.—I have to make a reference to the demise of Sri Chernenko (Konstantin Ustinovich), President of U.S.S,R. on 11-3-1985. He was President of U.S.S.R. for 13 months, was Head of Secretariat of Presidium of Supreme Soviet of the U.S.S.R. during 1960-65. was deputy to Supreme Soviet during 1966, was Head of General Department of Central Committee during 1965-1976, was candidate member of central committee CPSU during 1966-1971, was Secretary during 1976, was General Secretary Central Committee of CPSU during 1984was Chairman of Presidium of Supreme Soviet from April, 1984. During his regime the Indo-Soviet Friendship and Co-operation was co-ordial. The House mourns the loss of a true friend of India and great advocate of world peace.

I request the Hon'ble Members to stand in silence for a minute as a mark of respect to the departed leader.

ಅಧ್ಯಕ್ಷರು.—ಈ ಕೆಳಕಂಡ ವ್ಯಕ್ತಿಗಳು ನಿಧನರಾದರೆಂದು ಈ ಸಭೆಗೆ ತಿಳಿಸಲು ವಿಷಾದಿಸುತ್ತೇನೆ.

೧. ಶ್ರೀ ಚಿಕ್ಕೇಗೌಡರು, ಮಾಜಿ ಮೈಸೂರು ಪ್ರಜಾಪ್ರತಿನಿಧಿ ಸಭೆ ಸದಸ್ಯರು, ಇವರು ದಿನಾಂಕ ೭. ೧೨. ೧೯೪೪ ರಂದು ನಿಧನರಾದರು. ಇವರು ೧೯೪೧ ರಿಂದ ೧೯೪೫ರ ತನಕ ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

೨. ಶ್ರೀ ಟಿ. ಚನ್ನಯ್ಯ, ಮಾಜಿ ಆರೋಗ್ಯ ಸಚಿವರು, ಇವರು ದಿನಾಂಕ ೧೮. ೧. ೧೯೮೫ ರಂದು ನಿಧನರಾದರು. ಇವರು ೧೯೪೫ ರಿಂದ ೧೯೪೯ರ ತನಕ ಮೈಸೂರು ಪ್ರಜಾಪ್ರತಿನಿಧಿ ಸದಸ್ಯರಾಗಿ ನಂತರ ೧೯೫೨ ರಿಂದ ೧೯೫೭ರ ತನಕ ಮತ್ತು ೧೯೬೭ ರಿಂದ ೧೯೭೧ರ ತನಕ ವಿಧಾನಸಭಾ ಸದಸ್ಯರಾಗಿದ್ದರು. ಇವರು ೧೯೫೨ ರಿಂದ ೧೯೫೬ರ ವರೆಗೆ ಆರೋಗ್ಯ ಸಚಿವರಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.

೩. ಶ್ರೀ ಬಿ. ಎಸ್. ಶಂಕರಶೆಟ್ಟಿ, ಮಾಜಿ ಮೈಸೂರು ಪ್ರಜಾಪ್ರತಿನಿಧಿ ಸದಸ್ಯರು, ಇವರು ದಿನಾಂಕ ೨೫. ೧. ೧೯೮೫ ರಂದು ನಿಧನರಾದರು. ಇವರು ೧೯೩೭ ರಿಂದ ೧೯೪೦ರ ತನಕ ಪ್ರಜಾ ಪ್ರತಿನಿಧಿ ಸದಸ್ಯರಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.

೪. ಶ್ರೀ ಜಿ. ಆರ್. ಯತಿರಾಜುಲು ನಾಯ್ಡು, ಇವರು ದಿನಾಂಕ ೧೬. ೨. ೧೯೮೫ ರಂದು ನಿಧನರಾದರು. ಇವರು ರಾಜ್ಯಾಂಗ ರಚನಾ ಸಭೆ ಮತ್ತು ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.

೫. ಶ್ರೀ ಬಿ. ಶೀನಪ್ಪ, ಮಾಜಿ ಶಾಸಕರು, ಇವರು ದಿನಾಂಕ ೬. ೩. ೧೯೮೫ ರಂದು ನಿಧನರಾದರು. ಇವರು ೧೯೫೨ ರಿಂದ ೧೯೫೭ರ ತನಕ ಶಾಸಕರಾಗಿ ಜನ ಸೇವೆಯನ್ನು ಇವರು ಮಾಡಿರುತ್ತಾರೆ.

೬. ಶ್ರೀ ಬಿ. ಕೆ. ಪುಟ್ಟರಾಮಯ್ಯ, ಮಾಜಿ ಶಾಸಕರು, ಇವರು ದಿನಾಂಕ ೬. ೩. ೧೯೮೫ ರಂದು ನಿಧನರಾದರು. ಇವರು ೧೯೫೭ ರಿಂದ ೧೯೬೨ರ ತನಕ ವಿಧಾನಸಭೆಗೆ ಆಯ್ಕೆಯಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.

೭. ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು, ಮಾಜಿ ಶಾಸಕರು, ಇವರು ದಿನಾಂಕ ೧೭. ೩. ೧೯೮೫ ರಂದು ನಿಧನರಾದರು. ಇವರು ೧೯೭೨ ರಿಂದ ೧೯೭೭ರವರೆಗೆ ವಿಧಾನಸಭಾ ಸದಸ್ಯರಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.

ನಿಧನ ಹೊಂದಿದ ಸದಸ್ಯರ ಗೌರವದ ಅಂಗವಾಗಿ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಈ ಸಭೆಯಲ್ಲಿ ಅಂಗೀಕರಿಸಿದ ಸಂತಾಪ ಸೂಚನೆಯನ್ನು ಅಗಲಿದ ಸದಸ್ಯರುಗಳ ಕುಟುಂಬದವರಿಗೆ ಕಳುಹಿಸಿಕೊಡಲಾಗುವುದು.

(ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷಗಳ ಕಾಲ ಅಗಲಿದ ಸದಸ್ಯರ ಗೌರವಾರ್ಥ ಮೌನವನ್ನು ಆಚರಿಸಿದರು).

ಈಗ ಕೆಲವು ಪ್ರಕಟಣೆಗಳು Under sub-rule (1) of 207-B of the Rules of Procedure and Conduct of Business in the Legeslative Assembly....

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರು, ಒಂದು ನಿಮಿಷ, ಆಮೇಲೆ ತಾವು ಓದಿ. ಈಗ ಕನ್ನಡ ಆಡಳಿತ ಭಾಷೆ ಆಗಬೇಕೆಂದು ಹೇಳತಕ್ಕಂಥ ಸ್ಥಾನದಿಂದ, ತಾವು ಇಂಗ್ಲೀಷ್‌ನಲ್ಲಿ ಪ್ರಕಟಣೆಗಳನ್ನು ಮಾಡುವುದು ಸೂಕ್ತವಲ್ಲ. ಆದಕಾರಣ ತಾವು ದಯವಿಟ್ಟು ಇಂಗ್ಲೀಷನ್ನು ಕಡಿಮೆ ಮಾಡಿ, ಸಾಧ್ಯವಾದರೆ ಅದನ್ನು ಬಿಟ್ಟು ಕನ್ನಡದಲ್ಲಿಯೇ ಹೇಳಿದರೆ ಒಳ್ಳೆಯದು.